


# Make Your Dream Destination Come True

## Senior Special Travel America 2017

**Group Travel Bangalore - Bangalore***

**Special Offer price valid till 30 November 2016**

***All inclusive package**

**Hurry!!! Limited seats only!!!**

## East coast & West coast

### Places Covered:

**New York**
**Washington DC**
**Niagara Falls**
**Las Vegas**
**Los Angeles**
**San Francisco**

Whitehouse



Golden Gate



Las Vegas




Niagara Falls



**For booking & more details, please contact:**

**Basavanagudi**
# 98, 1st Floor, D.V.G Road,
Basavanagudi,
Bangalore - 560004.
Office: 080-26617178
Mob: **+91 9900080796**

**Malleshwaram**
# 198, 1st Floor,Yathrirajmath
Building, Malleshwaram,
Bangalore - 560003.
Office: 080 - 41204155/23445559
Mob: **+91 9900080793**

**Langford Town**
# 4,1st Floor, O Shaughnessy
Road, Langford Town,
Bangalore - 560025.
Office : 080 – 22221645
Mob: **+91 9900080799**

*All inclusive: Visa / Accommodation / All Transfers / Entrance Fee / All Taxes / Services of Tour Manager.



ಸಂಪಾದಕೀಯ

# ಎರಡು ಜಾಗತಿಕ ಚಲನೆಗಳು

ಇಂದು ಪ್ರಪಂಚದಲ್ಲಿ ಪ್ರತಿದಿನ ನಡೆಯುತ್ತಿರುವ ಆಗು ಹೋಗುಗಳನ್ನು ಗಮನಿಸಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ: ಜಗತ್ತಿನ ಎಲ್ಲ ಗೊಂದಲಗಳ ನಡುವೆ, ಅದೆಲ್ಲೋ ಶಾಂತಿಯ, ಸಮಾಧಾನದ, ನೆಮ್ಮದಿಯ ಕರೆ ಕೇಳಿಸುತ್ತದೆ. ಕೊಲೆ, ಸುಲಿಗೆ, ರಕ್ತಪಾತ, ಅಂತಃಕಲಹ, ಅನಾಚಾರಗಳ ನಡುವೆ, ಕ್ಷಿತಿಜದಾಚೆ ಯೆಲ್ಲೋ ನವಜೀವನದ, ಹೊಸಹುಟ್ಟಿನ ಮುಂಬೆಳಗು ಮೂಡಿ ಬರುವಂತಿದೆ. ಪ್ರಪಂಚ ನಾಶದ, ಮಹಾಯುದ್ಧದ ಹಾಗೂ ಭಯೋತ್ಪಾದಕರ ಮಾರಕ ಕೃತ್ಯಗಳ ಭಯದ ನಡುವೆಯಲ್ಲೇ ಅಧ್ಯಾತ್ಮದ, ಸತ್ಯ-ಧರ್ಮಗಳ, ನೀತಿ-ನ್ಯಾಯಗಳ ಧ್ವನಿ ವ್ಯಾಪಿಸ ತೊಡಗುತ್ತದೆ. ಆಧುನಿಕ ವಿಚಾರ, ಆವಿಷ್ಕಾರ, ವಿಜ್ಞಾನಗಳ ಮಧ್ಯೆ ಸನಾತನ ಸತ್ಯ, ಪುರಾತನ ಧರ್ಮ ಮತ್ತೆ ಹೊಸದಾಗಿ ಕಂಗೊಳಿ ಸುತ್ತದೆ. ಏನಿದರ ರಹಸ್ಯ?

## ಎರಡು ಬಗೆಯ ಚಲನೆಗಳು

ಜಗತ್ತು ಎರಡು ಬಗೆಯ ಚಲನೆಗಳನ್ನು ಕಂಡಿದೆ: ಹೊಸತನ್ನು ಕಾಣುವ, ಹೊಸತನ್ನು ಕಟ್ಟುವ ಭರದಲ್ಲಿ ಹಳೆಯದೆಲ್ಲವನ್ನೂ ಕೆಡವಿ ಹಾಕುವ ಉತ್ಸಾಹ. ಈ ಚಲನೆಯು ಅದಮ್ಯ ತುಡಿತದ ಭರ ದಲ್ಲಿ ಅನೇಕ ಬಾರಿ ಆಕ್ರಮಣಕಾರಿ ಮನೋಭಾವವನ್ನು ತೋರಿದೆ. ಭಾವುಕತೆಯ, ಸಾಮ್ರಾಜ್ಯಶಾಹಿ ಮನೋಭಾವದ ತೀವ್ರಗಾಮಿತ್ವ ಅನೇಕ ವೇಳೆ ಈ ಬಗೆಯ ಚಲನೆಗೆ ಪ್ರೇರಕವಾಗಿದೆ. ಮನುಕುಲದ ಸಮಗ್ರ ಏಳಿಗೆಯನ್ನು ಹಾಗೂ ಮಾನವೀಯ ಮೌಲ್ಯದ ದೃಷ್ಟಿ ಯನ್ನು ಅದು ಮಸುಕಾಗಿಸಿದೆ. ಪ್ರಪಂಚದ ಬಹುಭಾಗವನ್ನು ವ್ಯಾಪಿಸುವ, ಬಹುಜನರನ್ನು ಪ್ರಭಾವಿಸುವ ಈ ಚಲನೆಗಳು ಇತಿಹಾಸದಲ್ಲಿ ಹಲವು ಬಾರಿ 'ಕ್ರಾಂತಿ'ಯೆನಿಸಿವೆ: ಕೈಗಾರಿಕಾ ಕ್ರಾಂತಿ, ಪುನರುತ್ಥಾನ, ರಷ್ಯದ ಕ್ರಾಂತಿ, ವೈಜ್ಞಾನಿಕ ಕ್ರಾಂತಿ ಇತ್ಯಾದಿ. ಹೊಸತನ್ನು ಕಟ್ಟುವ ಭರದಲ್ಲಿ ಹಳೆಯ ಅನೇಕ ಅಮೂಲ್ಯ ಸೊತ್ತನ್ನು ಕಳೆದುಕೊಂಡ ಅನುಭವವೂ ನಮಗಿದೆ. ಹೊಸ ಆವಿಷ್ಕಾರಗಳ ಭವ್ಯಮಹಲುಗಳ ಹಿಂದೆ, ಕಸದರಾಶಿಯಲ್ಲಿ ಭೂಗತವಾದ ಅಮೂಲ್ಯ ರತ್ನಭಂಡಾರ — ಪಾಪ, ಮನುಕುಲದ ಪಾಡನ್ನು ನೋಡಿ ಮೂಕವಾಗಿ ಅತ್ತದ್ದೂ ಇದೆ. ಇದು ಒಂದು ಬಗೆಯ ಚಲನೆ.

ಇನ್ನೊಂದು ಬಗೆಯ ಚಲನೆ ವಿರುದ್ಧ ದಿಕ್ಕಿನತ್ತ ಸಾಗುವುದು: ಹೊಸತು ಬರಲಿ; ನವೀನ ಜ್ಞಾನ, ಆವಿಷ್ಕಾರ, ಬದಲಾವಣೆ ಎಲ್ಲವೂ ಸ್ವಾಗತಾರ್ಹವೆ. ಆದರೆ ಅದು ನಮ್ಮ ಈಗಿನ ಪ್ರಪಂಚ ವನ್ನು ಕೆಡವಿ, ಅದರ ತಿಪ್ಪೆಯ ಮೇಲೆ ಕಟ್ಟಬೇಕಾದದ್ದಲ್ಲ; ಬದಲಾವಣೆ ಏನಿದ್ದರೂ ಪ್ರಪಂಚ ಸೌಧವನ್ನು ಇನ್ನಷ್ಟು ಬಲ ಪಡಿಸುವಂಥದಾಗಿರಬೇಕು. ಏಕೆಂದರೆ, ಒಂದು ಬಾರಿ ಈ ಸೌಧ ಉರುಳಿ ಬಿದ್ದಿತೆಂದರೆ ಅನೇಕ ಅಮೂಲ್ಯ ಸಂಗತಿಗಳನ್ನು ನಾವು ಶಾಶ್ವತವಾಗಿ ಕಳೆದುಕೊಳ್ಳುವೆವು. ಅಂದರೆ ಬದಲಾವಣೆ, ಹೊಸತನ ಬೇಡವೆ? ಖಂಡಿತ ಬೇಕು. ಆದರೆ ಎಷ್ಟೋ ಕಾಲದಿಂದ ಬೆಳೆದು ಬಂದಿರುವ ಪರಂಪರೆ, ಸಂಸ್ಕೃತಿ, ಜ್ಞಾನವೈವಿಧ್ಯಗಳು ನಾಶವಾಗ ದಂತೆ ಈ ಬದಲಾವಣೆ ಗಳು ಬರಲಿ. ಮನುಕುಲ ನಿಂತಿರುವುದು ಎಷ್ಟೋ ಕಾಲದಿಂದ ಬೆಳೆದು ಬಂದಿರುವ ಪ್ರಕೃತಿ ನಿಯಮಗಳಿಂದ; ಅಂತೆಯೇ ಅನಾದಿ ಕಾಲದಿಂದ ಮಾನವನು ಕಂಡುಕೊಂಡ ಸನಾತನ ಮೌಲ್ಯಗಳಿಂದ. ಇವುಗಳಿಗೆ ವಿರುದ್ಧ ಹೋಗದೆ, ಅವುಗಳ ಸತ್ವವನ್ನು ಹೀರಿಕೊಂಡು ನಾವು ಮುನ್ನಡೆಯಬೇಕು. ಎಲ್ಲ ಬದಲಾವಣೆಗಳೂ ಹಳೆಯ ಅಡಿ ಪಾಯದ ಮೇಲೆ ಉಂಟಾಗಬೇಕು. ಆದರೆ ಅಡಿಪಾಯವನ್ನೇ ನಾಶಮಾಡುವುದು ವಿನಾಶಕರ. ಎಲ್ಲ ಬದಲಾವಣೆಗಳ ಹಿಂದೆ ಸತ್ಯ, ಶಾಂತಿ, ಆನಂದ, ಪ್ರೀತಿಯಂತಹ ಶಾಶ್ವತ ಮೌಲ್ಯಗಳು ನಿಂತಿದ್ದರೆ ಮಾತ್ರ ಜಗತ್ತು ಆರೋಗ್ಯಕರ ವಾಗಿಯೂ ಸುರಕ್ಷಿತವಾಗಿಯೂ ಇರಬಲ್ಲದು. ಈ ದಿಕ್ಕಿನಲ್ಲಿ ಚಿಂತಿ ಸುತ್ತ, ತಮ್ಮೆಲ್ಲ ಚಟುವಟಿಕೆಗಳನ್ನು ಇದಕ್ಕನುಗುಣವಾಗಿ ನಡೆಸುವ ಹಲವು ಚಳುವಳಿಗಳು ಕೂಡ ಅತ್ಯಂತ ಪ್ರಭಾವಶಾಲಿಯಾಗಿವೆ.

ಈ ಎರಡು ಚಲನೆಗಳ ನಡುವೆ ಹಲವು ಬಾರಿ ತಾತ್ತ್ವಿಕ ಸಂಘರ್ಷ ನಡೆದಿವೆ; ಅನೇಕ ವೇಳೆ ಅವು ದೊಡ್ಡ ಅನಾಹುತಗಳಲ್ಲಿ ಕೊನೆಗೊಂಡಿವೆ. ವಿಜ್ಞಾನ, ತಂತ್ರಜ್ಞಾನ, ಉದ್ಯಮಗಳು, ಹತ್ತು ಹಲವು ರಾಜಕೀಯ-ಸಾಮಾಜಿಕ ಬದಲಾವಣೆಗಳು ಈ ಎರಡು ಬಗೆಯ ಚಲನೆಗಳಿಂದ ಕೂಡಿವೆ; ಹಲವೆಡೆ ನಡೆಯುವ ಹಲವು ಬಗೆಯ ಬೌದ್ಧಿಕ ಚರ್ಚೆ, ವಿಚಾರ ವಿನಿಮಯಗಳು ಈ ಚಲನೆ ಗಳನ್ನು ಸಮರ್ಥಿಸಿ ಅಥವಾ ವಿರೋಧಿಸಿ ನಡೆಯುತ್ತವೆ. ಇವೆರಡರ ವ್ಯತ್ಯಾಸವಿಷ್ಟೆ: ಒಂದು ಹೊಸತನ್ನಷ್ಟೇ ಬಯಸುತ್ತದೆ, ವಿನಾಶವನ್ನು ಲೆಕ್ಕಿಸದು. ಇನ್ನೊಂದು, ಹಳೆಯದನ್ನು ಬಲಪಡಿಸುತ್ತ ಹೊಸತನ್ನು ಕಂಡುಕೊಳ್ಳುತ್ತದೆ.

ಕೇವಲ ಏಳಿಗೆ, ಅಭಿವೃದ್ಧಿ ಹಾಗೂ ಹೊಸ ಆವಿಷ್ಕಾರಗಳಿಂದ ಮಾತ್ರವೇ ಮಾನವನ ಒಟ್ಟು ಜೀವನವು ಶಾಂತಿ, ನೆಮ್ಮದಿ, ಆನಂದ ಗಳನ್ನು ಹೊಂದಲಾರದೆಂಬ ಸತ್ಯ ಮಾನವನಿಗೆ ಅರ್ಥವಾದುದು ತುಂಬಾ ತಡವಾಗಿ. ಎರಡು ಮಹಾಯುದ್ಧಗಳ ನಂತರ ಜಾಗತಿಕ ಮಟ್ಟದಲ್ಲಿ ಶಾಂತಿ, ಸೌಹಾರ್ದಗಳ ಅಗತ್ಯ ಎಷ್ಟು ಮುಖ್ಯವೆಂಬು ದನ್ನು ಎಲ್ಲ ದೇಶಗಳೂ ಕಂಡುಕೊಂಡವು. ಇದಕ್ಕನುಗುಣವಾಗಿ